ಸಾಕ್ಷಿಯನ್ನು ದಿಃ**19.03.2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**
ಮುಂದುವರೆದ ಮುಖ್ಯ ವಿಚಾರಣೆ **1** ನೇ ಅರ್ಜಿದಾರರ ಪರ ಶ್ರೀ ಎಂ ಕೆ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳೆಲ್ಲವೂ ಸತ್ಯವಾಗಿದ್ದು ಅದಕ್ಕೆ ನಾನು ಸಹಿ ಮಾಡಿದ್ದೇನೆ**.** ಎಂ ಸಿ 17/2020 ರ ಸಂಪೂರ್ಣ ಆದೇಶದ ಪ್ರತಿ ದೃಢೀಕೃತ ನಕಲು, ನೋಟೀಸ್, ಆರ್ ಪಿ ಎ ಡಿ ನೋಟೀಸ್ ಮತ್ತು ಪೊಸ್ಟಲ್ ಕವರ್, ಅಂಚೆ ಸ್ವೀಕೃತಿ, ಸದರಿ ಪ್ರಕರಣದ ಅರ್ಜಿ, ತೀರ್ಪು ಮತ್ತು ಡಿಕ್ರಿ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 1 ರಿಂದ ನಿಪಿ-10 ಎಂದು ಗುರುತಿಸಲಾಯಿತು. ನನ್ನ ಇಬ್ಬರು ಮಕ್ಕಳ ಜನನ ಪ್ರಮಾಣ ಪತ್ರ,, 2 ಆಧಾರ್ ಕಾರ್ಡ್, ಪ್ರಮಾಣ ಪತ್ರದ ನೋಟರಿ ದಾಖಲೆ ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ -11 ರಿಂದ 14 ಎಂದು ಗುರುತಿಸಲಾಯಿತು. ರಾಷ್ಟ್ರೀಯ ಹೆದ್ದಾರಿ ಟೋಲ್ ನಲ್ಲಿ ಕೆಲಸಕ್ಕೆ ಇದ್ದ ಬಗ್ಗೆ ಐಡಿ ಕಾರ್ಡ್ ನ ದೃಢೀಕೃತ ನಕಲನ್ನು ನೋಡುತ್ತಿದ್ದು ಅದನ್ನು ನಿಪಿ 16 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗಾಗಿ ಶ್ರೀ ಬಿ ಎನ್ ಟಿ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು**.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**.**

ಓ ಹೇ ಕೇ ಸರಿ ಇದೆ**.**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು**.**